# ಆತ್ಮಜಾಗೃತಿ



❖ ಜ್ಞಾನೋದಯವಾದರೆ ಆತ ದೂರದಲ್ಲಿದ್ದಾನೆ ಎಂಬುದಾಗಿ ಅನಿಸೋದಿಲ್ಲ. ಆಗ ಅವನು ಅವನಾಗಿ ತೋರೋದಿಲ್ಲ. ಇವನಾಗಿ ಬಿಡುತ್ತಾನೆ. ಆಗ ಅವನನ್ನು ಹೃದಯ ಮಧ್ಯದಲ್ಲಿ ನೋಡಬಹುದು. ಆತ ಎಲ್ಲರ ಅಂತರ್ಯದಲ್ಲಿಯೂ ಇದ್ದಾನೆ ಅರಸಿದವರಿಗೆ ದೊರೆತು ಬಿಡುತ್ತಾನೆ.

❖ ಆತ್ಮಜಾಗೃತಿ ಆಗದೆ ಇದ್ದರೆ ಆತನ ಸ್ವರೂಪವನ್ನು ಅರಿಯಲಾಗುವುದಿಲ್ಲ. ವಿಚಾರದ ಆವಶ್ಯಕತೆ ಎಲ್ಲಿಯವರೆಗೆ? ಆತನ ಸಾಕ್ಷಾತ್ಕಾರವಾಗದವರೆಗೆ. ಎಲ್ಲವೂ ಆತನೇ ಆಗಿರುವುದನ್ನು ನಾನೂ ಪ್ರತ್ಯಕ್ಷವಾಗಿ ನೋಡುತ್ತಿದ್ದೇನೆ ಅಂತ ಬರೀ ಬಾಯಿಮಾತಿನಲ್ಲಿ ಹೇಳಿಬಿಟ್ಟರಾಗುವುದಿಲ್ಲ; ಆತನ ಕೃಪೆಯಿಂದ ಆತ್ಮಜಾಗೃತಿ ಉಂಟಾಗಬೇಕು. ಆತ್ಮಜಾಗೃತಿಗೊಂಡಿತು ಅಂದರೆ ಸಮಾಧಿಯುಂಟಾಗುತ್ತದೆ; ಆಗ ದೇಹಭಾವನೆ ಹೊರಟುಹೋಗುತ್ತದೆ; ಕಾಮಕಾಂಚನಾಸಕ್ತಿ ಇರದು; ಭಗವದ್ವಿಷಯ ವಿನಾ ಬೇರೆ ಏನೂ ರುಚಿಸದು; ಪ್ರಾಪಂಚಿಕ ಮಾತುಕತೆಗಳು ಕಿವಿಗೆ ಬಿತ್ತು ಅಂದರೆ ಯಾತನೆಯುಂಟಾಗುತ್ತದೆ. ಆತ್ಮಜಾಗೃತಿಗೊಂಡರೇನೇ ಭಗವಂತನನ್ನು ಅರಿಯಲು ಸಾಧ್ಯವಾಗುತ್ತದೆ.

❖ ಯಾರಿಗೇ ಆಗಲಿ ಒಮ್ಮೆ ಆತ್ಮಜಾಗೃತಿಯುಂಟಾಗಿಬಿಟ್ಟಿತು ಅಂದರೆ, ಒಮ್ಮೆ ಭಗವಂತನ ದರ್ಶನ ದೊರೆತುಬಿಟ್ಟಿತು ಅಂದರೆ, ಈ ಕೆಲಸಕ್ಕೆ ಬಾರದವುಗಳ ವಿಷಯವಾಗಿ ತಿಳಿದುಕೊಳ್ಳಲು ಇಚ್ಛೆಯೇ ಬರುವುದಿಲ್ಲ. ವಿಷಮಶೀತಜ್ವರದಿಂದ ಸನ್ನಿ ಮುಚ್ಚಿಕೊಂಡಿರುವ ರೋಗಿ ಹೇಳುತ್ತಾನೆ, 'ನಾನು ಐದು ಸೇರು ಅಕ್ಕಿಯ ಅನ್ನ ಊಟಮಾಡಿಬಿಡುತ್ತೇನೆ, ಒಂದು ಇಡೀ ಕೆರೆ ನೀರನ್ನೇ ಕುಡಿದು ಬಿಡುತ್ತೇನೆ!' ಆಗ ಡಾಕ್ಟರ್ ಹೇಳುತ್ತಾನೆ, 'ಹಾಗೇನು? ಆಗಲಿ! ಬಹಳ ಒಳ್ಳೆಯದು'. ಹೀಗೆಂದು ಹೇಳಿ ಹುಕ್ಕ ಸೇದುತ್ತ ಹರಟೆ ಹೊಡೆಯುತ್ತಿರುತ್ತಾನೆ. ಆದರೆ ಯಾವಾಗ ಸನ್ನಿ ಇಳಿದು ಹೋಗಿ ಬಿಡುವುದೋ ಆಗ ರೋಗಿಯ ಕಷ್ಟಸುಖಗಳಿಗೆಲ್ಲ ಕಿವಿಗೊಡಬೇಕಾಗುತ್ತದೆ.

❖ ಎಲ್ಲರಿಗೂ ಬ್ರಹ್ಮಜ್ಞಾನ ಸಾಧ್ಯ. ಜೀವಾತ್ಮ ಪರಮಾತ್ಮ ಎಂಬ ಎರಡು ವಸ್ತುಗಳು ಇವೆ. ಪ್ರಾರ್ಥನೆಯಿಂದ ಜೀವಾತ್ಮ ಪರಮಾತ್ಮನೊಡನೆ ಐಕ್ಯವಾಗಲು ಸಾಧ್ಯ. ಗ್ಯಾಸ್ ಕಂಪೆನಿಯವರು ಪ್ರತಿಯೊಂದು ಮನೆಗೂ ತಮ್ಮ ಕೊಳವೆಯನ್ನು ಕೂಡಿಸಿದ್ದಾರೆ. ಗ್ಯಾಸನ್ನು ಕಂಪೆನಿಯಿಂದ ಪಡೆದುಕೊಳ್ಳಬಹುದು. ಕಂಪೆನಿಗೆ ಒಂದು ಅರ್ಜಿ ಹಾಕಿಕೊಂಡರೆ ಅವರು ಗ್ಯಾಸ್ ಸರಬರಾಜು ಮಾಡುತ್ತಾರೆ. ಬಳಿಕ ಮನೆಗಳಲ್ಲಿ ದೀಪ ಹೊತ್ತಿಸಿಕೊಳ್ಳಬಹುದು.

ಕೆಲವರಲ್ಲಿ ಆಗಲೇ ಆತ್ಮಜಾಗ್ರತಿ ಉಂಟಾಗಿ ಬಿಟ್ಟಿರುತ್ತದೆ. ಅವರಲ್ಲಿ ಒಂದು ವಿಶೇಷ ಗುಣ ನೋಡಬಹುದು. ಭಗವತ್ಸಂಬಂಧವಾದ ಮಾತುಕತೆ ವಿನಾ ಬೇರೆ ಏನೂ ಅವರಿಗೆ ರುಚಿಸದು. ಅವರು ಚಾತಕಪಕ್ಷಿಯ ಹಾಗೆ. ಏಳು ಸಮುದ್ರದಲ್ಲಿ, ಗಂಗೆಯಲ್ಲಿ, ಯಮುನೆಯಲ್ಲಿ ಉಳಿದ ನದಿಗಳಲ್ಲಿ ನೀರು ಸುಮ್ಮನೆ ತುಂಬಿದೆ. ಅದಕ್ಕೆ ಬೇಕಾಗಿರುವುದು ಮಳೆ ನೀರು. ನೀರಡಿಕೆಯಿಂದ ಗಂಟಲು ಒಣಗಿ ಸಾಯುತ್ತಿದ್ದರೂ ಅದು ಬೇರೆ ಯಾವ ನೀರನ್ನೂ ಕುಡಿಯದು.

❖ ಮತ್ತೆ ನಿತ್ಯಸಿದ್ಧರಿದ್ದಾರೆ. ಅವರು ಆತ್ಮಜಾಗೃತಿಯನ್ನು ಹೊಂದಿಯೇ ಪ್ರತಿಯೊಂದು ಸಲವೂ ಜನ್ಮವೆತ್ತುತ್ತಾರೆ. ಇವರನ್ನು ಮುಚ್ಚಿಹೋಗಿರುವ ಬುಗ್ಗೆಗಳಿಗೆ ಹೋಲಿಸಬಹುದು. ಕೊಳಾಯಿಗಾರ ತೋಟದಲ್ಲಿ ಅಲ್ಲಿ ಇಲ್ಲಿ ಅಗೆಯುತ್ತಿರುವಾಗ ಅಕಸ್ಮಾತ್ತಾಗಿ ಆತ ಬುಗ್ಗೆಯ ತಡೆಯನ್ನು ತೆಗೆದುಹಾಕಿಬಿಡಬಹುದು. ಆಗ ನೀರು 'ಭರ್, ಭರ್' ಅಂತ ಹೊರಕ್ಕೆ ನುಗ್ಗಿಬರುತ್ತದೆ. ಹಾಗೆ ನಿತ್ಯಸಿದ್ಧರ ಪ್ರಥಮಾನುರಾಗ ವ್ಯಕ್ತವಾದಾಗ ಜನ ಆಶ್ಚರ್ಯಚಕಿತರಾಗಿ ಹೇಳುತ್ತಾರೆ: ''ಇಷ್ಟೊಂದು ಭಕ್ತಿ, ವೈರಾಗ್ಯ, ಪ್ರೇಮ ಎಲ್ಲಿ ಇತ್ತು?''

❖ ಅದ್ವೈತಜ್ಞಾನ ದೊರೆತನಂತರ ಆತ್ಮಜಾಗ್ರತಿಯುಂಟಾಗಿ ಬಿಡುತ್ತದೆ. ಆಗ ಸರ್ವಭೂತಗಳಲ್ಲೂ ಭಗವಂತ ಚೈತನ್ಯರೂಪದಿಂದಿರುವುದು ಕಾಣಬರುತ್ತದೆ. ಈ ಅನುಭವ ದೊರೆತ ನಂತರ ಆನಂದ ದೊರೆಯುತ್ತದೆ. ಮೊದಲು ಅದ್ವೈತಜ್ಞಾನ, ಬಳಿಕ ಆತ್ಮಜಾಗ್ರತಿ, ಅನಂತರ ನಿತ್ಯಾನಂದ.

❖ ಜೀವ ಮೊದಮೊದಲು ಅಜ್ಞಾನಾವಸ್ಥೆಯಲ್ಲಿ ಮುಳುಗಿಕೊಂಡಿರುತ್ತದೆ. ಅದಕ್ಕೆ ಭಗವಂತನ ಜ್ಞಾನವಿರದು; ನಾನಾ ವಸ್ತುಗಳ ಜ್ಞಾನ–ಅನೇಕ ವಸ್ತುಗಳ ಜ್ಞಾನ ಇರುತ್ತದೆ. ಆದರೆ ಜ್ಞಾನ ದೊರೆತಾಗ ಅದಕ್ಕೆ ಬೋಧೆಯಾಗುತ್ತದೆ, ಭಗವಂತ ಸರ್ವಭೂತಗಳಲ್ಲೂ ಇದ್ದಾನೆ ಎಂದು. ಒಬ್ಬನ ಕಾಲಿಗೆ ಮುಳ್ಳು ಚುಚ್ಚಿಕೊಂಡಿದೆ ಅಂತ ಇಟ್ಟುಕೊಳ್ಳಿ. ಆತ ಇನ್ನೊಂದು ಮುಳ್ಳನ್ನು ಹುಡುಕಿತಂದು ಮೊದಲನೆ ಮುಳ್ಳನ್ನು ತೆಗೆದುಹಾಕಿಬಿಡುತ್ತಾನೆ. ಎಂದರೆ, ಸಾಧಕ 'ಅಜ್ಞಾನ'ವೆಂಬ ಮುಳ್ಳನ್ನು 'ಜ್ಞಾನ'ವೆಂಬ ಮುಳ್ಳಿನಿಂದ ತೆಗೆದು ಹಾಕುತ್ತಾನೆ. ವಿಜ್ಞಾನ ದೊರೆತಾಗ ಆತ ಎರಡು ಮುಳ್ಳನ್ನೂ ಬಿಸಾಡಿಬಿಡುತ್ತಾನೆ – ಅಜ್ಞಾನದ ಮುಳ್ಳು, ಜ್ಞಾನದ ಮುಳ್ಳು ಎರಡನ್ನೂ. ಬಳಿಕ ಆತ ರಾತ್ರಿ ಹಗಲು ಭಗವಂತನನ್ನು ಕೇವಲ ದರ್ಶನ ಮಾಡುತ್ತಿರುವುದೇ ಅಲ್ಲ, ಆತನೊಡನೆ ಮಾತುಕತೆಯಾಡುತ್ತಲೂ ಇರುತ್ತಾನೆ.

ಶ್ರೀರಾಮಕೃಷ್ಣ ವಚನವೇದದಿಂದ

# ತತ್ತ್ವ-ಜ್ಞಾನ

- ಪುಷ್ಪಾ ಶೇಷಾದ್ರಿ

ಜೀವನದಲ್ಲಿ ಶ್ರೇಯಸ್ಸಿನ ರಹಸ್ಯವೇ ಆಧ್ಯಾತ್ಮಿಕ ಸಂಪನ್ನತೆ. ಅದಕ್ಕೆ ಅತ್ಯಗತ್ಯವಾದ ಜೀವನವಿಧಾನವನ್ನು ಕಲಿಸಿಕೊಡುವುದೇ ತತ್ತ್ವಜ್ಞಾನ. ಯೋಗ, ಸಾಧನೆ, ತತ್ತ್ವ, ಅಧ್ಯಾತ್ಮ - ಎಲ್ಲವೂ ಆಧ್ಯಾತ್ಮಿಕ ಜೀವನವನ್ನು ಮುನ್ನಡೆಸುವುದು ಎಂಬ ವಿಚಾರವನ್ನು ವಿಶದಪಡಿಸಿರುವ ಲೇಖಕಿ, ಮೈಸೂರಿನ ನಿವಾಸಿಗಳು ಹಾಗೂ ಆಶ್ರಮದ ಭಕ್ತರು.

**ಯೋ**ಗವೆಂದರೆ ಒಂದುಗೂಡಿಸುವುದು. ಅಂದರೆ, ಆತ್ಮನನ್ನು ಪರಮಾತ್ಮನೊಡನೆ ಸಂಪರ್ಕಿಸುವುದು. ಇವೆರಡೂ ಒಂದನ್ನೊಂದು ಹೊಂದಿಕೊಂಡಿವೆ. ಆದರೆ ನಮ್ಮ ಅಜ್ಞಾನದಿಂದ ಅವುಗಳ ಸಂಪರ್ಕ ಕಡಿದು ಹೋಗಿದೆ. ಅದನ್ನು ಯೋಗಾಭ್ಯಾಸದಿಂದ ಒಂದುಗೂಡಿಸಲು ಸಾಧ್ಯ. ಆದ್ದರಿಂದ ವಿವೇಕವನ್ನು ಹೊಂದಬಹುದಾದ ಮನುಷ್ಯಜನ್ಮ ನಮಗೆ ದೊರಕಿರುವುದರಿಂದ ಈ ಜನ್ಮದಲ್ಲೇ ಅದನ್ನು ಪಡೆಯಲು ಪ್ರಯತ್ನಿಸಬೇಕು. ಆತ್ಮವು ಸತ್ತ್ವಗುಣದಲ್ಲಿದ್ದಾಗ, ಪಂಚೇಂದ್ರಿಯಗಳು ಮತ್ತು ದೇಹ ಪ್ರಶಾಂತ ಗುಣವುಳ್ಳದ್ದಾಗಿರುವುದು. ಏಕೆಂದರೆ ಪರಮಾತ್ಮನು ಸತ್ತ್ವಗುಣಿ. ನಾವು ಮನಸ್ಸನ್ನು ಪರಮಾತ್ಮನ ಕಡೆಗೆ ತಿರುಗಿಸಿದಾಗ, ನಾವು ಸಹ ಆ ಪರಮಾತ್ಮನ ಸತ್ತ್ವಗುಣಗಳನ್ನು ಪಡೆಯಲು ಸಾಧ್ಯ. ಅದಕ್ಕೆ ಧ್ಯಾನ ಮಾಡುವಾಗ ದೇವರ ಗುಣಗಳನ್ನು ಧ್ಯಾನಮಾಡಬೇಕು.

ಇದರಿಂದ ನಮಗಾಗುವ ಪ್ರಯೋಜನವೇನು? ಎಂದು ತಿಳಿಯಬೇಕಾದರೆ, ಜ್ಞಾನದ ಆವಶ್ಯಕತೆ ಇದೆ. ಜ್ಞಾನದ ವಿಷಯವಾಗಿ ನಮಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದರಿಂದ, ಅಧ್ಯಾತ್ಮದಲ್ಲಿ ನಮಗೆ ನಂಬಿಕೆ ಬಾರದು. ಇದನ್ನರಿಯಲು ನಮ್ಮಲ್ಲಿರುವ ಗುಣ ತತ್ತ್ವಪ್ರಧಾನವಾಗಿರಬೇಕು. ಮೊದಲನೆಯದಾಗಿ, ತನ್ನನ್ನು ತಾನು ಅರಿಯಬೇಕು. ಇದನ್ನರಿಯಲು ಜ್ಞಾನ ಬೇಕಾಗುವುದು. ಎಲ್ಲರಿಗೂ ನಾವು ಆತ್ಮಸ್ವರೂಪಿ ಎಂದು ಗೊತ್ತು. ಆದರೆ ಅದನ್ನು ಸರಿಯಾಗಿ ಅನುಭವಿಸಲು ಜ್ಞಾನ ಮತ್ತು ಸತ್ತ್ವಗುಣಗಳ ಆವಶ್ಯಕತೆ ಇದೆ. ಪ್ರೇಮ, ಶಾಂತಿ, ಪವಿತ್ರತೆ, ವಿವೇಕ, ಸಂತೋಷ, ಶಕ್ತಿ ಮತ್ತು ಅಧ್ಯಾತದ ಅರಿವು - ಈ ಏಳು ಗುಣಗಳು ನಮ್ಮ ಮೂಲ ಗುಣಗಳು. ಅವು ನಮ್ಮೊಳಗೆ ಅಡಗಿವೆ. ಇವುಗಳನ್ನು ಹೊರತರಲು, ಅಧ್ಯಾತ್ಮ ಜ್ಞಾನ ಮತ್ತು ಪ್ರಯತ್ನ ಬೇಕು.

ಮನಸ್ಸು ಮತ್ತು ಬುದ್ಧಿಯ ಪವಿತ್ರತೆಯಿಂದ ನಾವು ಎಲ್ಲರಲ್ಲೂ ಒಳ್ಳೆಯ ಸಂಬಂಧವನ್ನು ಬೆಳೆಸಲು ಸಾಧ್ಯ. ಪವಿತ್ರತೆಯಿಂದ ನೆಮ್ಮದಿ ಮತ್ತು ಶಾಂತಿ ಸಿಗುವುದು. ಸರಿಯಾದ ತಿಳುವಳಿಕೆ ಇಲ್ಲದಾಗ, ಮನಸ್ಸು ತಳಮಳಗೊಳ್ಳುವುದು. ಅರಿವು ಸರಿಯಾಗಿದ್ದರೆ, ಶಾಂತಿ ಸ್ವಭಾವದಿಂದ ನಮ್ಮ ದೃಷ್ಟಿಕೋನ, ಭಾವನೆ, ವ್ಯವಹಾರ ಎಲ್ಲದರಲ್ಲೂ ಪವಿತ್ರತೆಯನ್ನು ಕಾಣಬಹುದು.

ಎರಡನೆಯದಾಗಿ ಶಕ್ತಿ. ಇದು ನಮ್ಮಲ್ಲಿರುವ ಮತ್ತೊಂದು ಗುಣ. ಇಲ್ಲಿ ಶಕ್ತಿ ಎಂದರೆ ದೃಢಕಾಯದ, ದೇಹದ ಶಕ್ತಿ ಎಂದಲ್ಲ, ಬದಲು ದೈವೀಗುಣ ಮತ್ತು ಪವಿತ್ರವಾದ ಆಲೋಚನೆಯ ಶಕ್ತಿ, ಆತ್ಮದ ಸ್ವಧರ್ಮ. ಎಲ್ಲದಕ್ಕೂ ಪವಿತ್ರತೆಯೇ ಆಧಾರ. ಹೇಗೆ ನಾವು ದೇವಸ್ಥಾನಕ್ಕೆ ಹೋದಾಗ, ಚಪ್ಪಲಿಗಳನ್ನು ಹೊರಗಿಟ್ಟು, ಒಳಗೆ ಭಗವಂತನ ದರ್ಶನಕ್ಕೆ ಹೋಗುವೆವೋ, ಅಂತೆಯೇ ನಮ್ಮಲ್ಲಿರುವ 'ಅಹಂ' ಅನ್ನು ನಮ್ಮಿಂದ ಹೊರಗಿಟ್ಟು, ಮನಸ್ಸನ್ನು ಒಳತಿರುಗಿಸಿ ನೋಡಿದರೆ, ಅಲ್ಲಿ ಪವಿತ್ರತೆ ಸಿಗುವುದು. ನಮ್ಮ 'ಅಹಂ'ನಿಂದ ನಾವು ಹೊರಬಂದರೆ, ಬೇರೆಯವರಿಗೆ ಪ್ರೀತಿ, ಸಹಾನುಭೂತಿ, ಅನುಕಂಪಗಳನ್ನು ಕೊಡಲು ಸಾಧ್ಯ. ನಮ್ಮ ಮನಸ್ಸೇ ಚಂಚಲವಾಗಿದ್ದಲ್ಲಿ 'ನನ್ನ ಬಿಟ್ಟರೆ ಸಮಾನರಿಲ್ಲ'ವೆಂದು ತಿಳಿದರೆ, ಮತ್ತೊಬ್ಬರಿಗೆ ನಾವೇನು ಕೊಡಲು ಸಾಧ್ಯ? ನಾವು ಮೊದಲು ಮತ್ತೊಬ್ಬರಿಗೆ ಪ್ರೇಮ, ಸಹಾನುಭೂತಿಯನ್ನು ನೀಡಿದರೆ, ಅವರಿಂದಲೂ ಅದನ್ನೇ ಪಡೆಯಲು ಸಾಧ್ಯ. ಬಸವಣ್ಣನವರು ಹೇಳುವಂತೆ, 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ.' ನಾವು ಒಂದು ಚೆಂಡನ್ನು ಗೋಡೆಗೆ ಎಸೆದರೆ, ಅದು ಪುನಃ ಹಿಂತಿರುಗಿ ಬರುವುದು. ಮಾನವನು ಸಹಜವಾಗಿ ಆಶಾವಾದಿ, ಮತ್ತೊಬ್ಬರಿಂದ ಬಯಸುವೆವು. ಬಯಕೆ, ಆಸೆ ಫಲಿಸದಿದ್ದರೆ 'ನಿರಾಸೆ'; ಫಲಿಸಿದರೆ 'ಮತ್ತಷ್ಟರಾಸೆ.' ಭಗವದ್ಗೀತೆಯ ಎರಡನೇ ಅಧ್ಯಾಯದಲ್ಲಿ ಪರಮಾತ್ಮನು ಹೇಳಿರುವಂತೆ,

**ಧ್ಯಾಯತೋವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।**
**ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ।**
**ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ।**
**ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ॥**

-ಹೀಗೆ ಆಸೆಯಿಂದ ಎಲ್ಲವೂ ನಾಶವಾಗುವುದು. ಆಸೆ ಫಲಿಸದಿದ್ದರೆ, ಮನಸ್ಥಿತಿಯನ್ನು ಕಳೆದುಕೊಳ್ಳುವೆವು. ಆ ಸ್ಥಿತಿಯಲ್ಲಿ ನಾವು ಆಡಿದ ಮಾತು, ಕಾರ್ಯ ಎಲ್ಲವೂ ವ್ಯರ್ಥ. ಆದ್ದರಿಂದ ಆಸೆಯೇ ದುಃಖಕ್ಕೆ ಮೂಲ. ಆಸೆ ಇಲ್ಲದೆ ಜೀವನವೇ ಸಾಧ್ಯವಿಲ್ಲ; ಆದರೆ ಅತಿ ಆಸೆ ಇರಬಾರದಷ್ಟೆ. ಇಲ್ಲಿ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದಲ್ಲಿ ಬರುವ 'ಅತಿ ಎಲ್ಲಿಯುಂ ಬೇಡ ಮಿತಿ ಇರಲಿ ಜೀವನದಿ' ಎಂಬ ಪದ್ಯ ನೆನಪಾಗುವುದು. ಯಾವಾಗ ನಾವು ಯಾರಿಂದಲೂ ಏನನ್ನೂ ಬಯಸುವುದಿಲ್ಲವೋ, ಆಗ ನಮಗೆ ಎಲ್ಲವೂ ಆಪ್ಯಾಯಮಾನವಾಗಿರುವುದು ಸಹಜ. ಇದಕ್ಕಾಗಿ ನಾವು ನಿರ್ಲಿಪ್ತತೆಯಿಂದ ಇರಬೇಕು. ಗೀತೆಯಲ್ಲಿ ಭಗವಂತ, ನಿರ್ಲಿಪ್ತತೆಯಿಂದ ಕರ್ತವ್ಯ ಮಾಡಿರೆಂದು ಒತ್ತಿ ಒತ್ತಿ ಹೇಳುವನು.